ಅಧ್ಯಕ್ಷರು.—ಹಾಗಿದ್ದರೆ ಇದನ್ನು ಕೈಗಾರಿಕಾ ಮಂತ್ರಿಗಳಿಗೆ ವರ್ಗಾವಣೆ ಮಾಡೋಣ.

ಅಧ್ಯಕ್ಷರು.—ಕುಶಾಲ. ಗೈರು ಹಾಜರಿ

ಮಂಗಳೂರಿನಲ್ಲಿ ಜನ ವಾಸಿಸುತ್ತಿರುವ ಜಾಗದಲ್ಲಿ ಕೊಳಚೆ ಸಾಮಗ್ರಿಗಳನ್ನು ಹಾಕಂತ್ತಿರುವ ಬಗ್ಗೆ

೪. ಶ್ರೀ ರಾಮಾನಾಥ್ ರೈ (ಬಂಟ್ವಾಳ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮಂಗಳೂರು ಮಹಾನಗರಪಾಲಿಕೆಯು ಜನ ವಾಸಿಸುತ್ತಿರುವ ಜಾಗದಲ್ಲಿ ಕೊಳಚೆ ಸಾಮಗ್ರಿಗಳನ್ನು ಹಾಕಂತ್ತಿರುವ ಬಗ್ಗೆ ಜನ ವಿರೋಧ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

೨) ಹಾಗಿದ್ದಲ್ಲಿ ಶಾಶ್ವತ ಬದಲಿ ವ್ಯವಸ್ಥೆ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಹೌದು

೨ ಕಸಕಡ್ಡಿಗಳನ್ನು ಸಾಗಿಸುವುದಕ್ಕೆ ಬೇರೆ ಸ್ಥಳಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ನಗರಪಾಲಿಕೆಯು ಈಗಾಗಲೇ ನೆಲಮಟ್ಟವನ್ನು ಸಮತಟ್ಟಾಗಿ ಮಾಡಿ ಕಸಕಡ್ಡಿಗಳನ್ನು ಚೆಲ್ಲುವುದಕ್ಕೆ ರೂ. ೬೦,೦೦೦ಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರಪಾಲಿಕೆಯ ಪರಿಮಿತಿಯೊಳಗೆ ವಾಮಂಜೂರು ಎನ್ನುವ ಸ್ಥಳ ಇದೆ. ಇದು ಜನ ವಾಸ ಮಾಡುವ ಸ್ಥಳವಾಗಿದೆ. ಇಲ್ಲಿ ಮಹಾನಗರ ಪಾಲಿಕೆಯವರು ಸತ್ತ ಪ್ರಾಣಿಗಳನ್ನು ಇನ್ನಿತರೆ ಕೊಳಚೆ ವಸ್ತುಗಳನ್ನು ರಸ್ತೆಯ ಪಕ್ಕದಲ್ಲಿಯೇ ಡಂಪ್ ಮಾಡುತ್ತಿದ್ದಾರೆ ಈ ಜಾಗದಲ್ಲಿ ಸುಮಾರಾಗಿ ಪ್ರಾಥಮಶಾಲೆ, ಪ್ರಾಥಮಿಕ ಶಾಲೆ, ಕೃಷಿ ಶಾಲೆ, ಚರ್ಚ್, ಒಂದು ಅಂಗಪಿಕಲರ ಶಾಲೆ ಇದೆ. ಇಲ್ಲಿ ವಾಸಮಾಡುತಕ್ಕ ಜನ ಇದರಿಂದಾಗಿ ಬಹಳಷ್ಟು ಸಾರಿ ರೊಚ್ಚಿಗೆದ್ದು ಗಲಾಟೆ ಕೂಡ ಮಾಡಿದ್ದಾರೆ ಅಂತಹ ಸಂದರ್ಭದಲ್ಲಿ ಪೋಲೀಸರ ಪ್ರವೇಶ ಕೂಡ ಆಗಿದೆ ಆದ್ದರಿಂದ ಈ ಕಸಕಡಿ ಮತ್ತು ಸತ್ತಪ್ರಾಣಿಗಳನ್ನು ಹಾಕತಕ್ಕ ಭಾಗವನ್ನು ಕೂಡಲೇ ಬದಲಾಯಿಸಬೇಕಂ. ಜನರ ಆರೋಗ್ಯವನ್ನು ಕೆಡಿಸಿ, ಜನರನ್ನು ರೋಗಗ್ರಸ್ತರನ್ನಾಗಿ ಮಾಡುವಂಥ ಈ ಒಂದು ಕೆಲಸವನ್ನು ಕೂಡಲೇ ನಿಲ್ಲಿಸಬೇಕು. ಕಸಕಡಿ ಮತ್ತಿತರ ವಸ್ತುಗಳನ್ನು ಸಮುದ್ರಕ್ಕಾದರೂ ಹಾಕಲಿ ಅಥವಾ ಬೆಂಕಿಯಲ್ಲಿ ಹಾಕಿ ನಾಶ ಮಾಡತಕ್ಕ ಒಂದು ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಸನ್ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ನಾಗರೀಕರ ಒಂದು ನೈರ್ಮಲ್ಯ ಮತ್ತು ಅವರ ಆರೋಗ್ಯದ ದೃಷ್ಟಿಯಿಂದ ಏನು ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ ಹಾಗೂ ಸರ್ಕಾರದ ಗಮನವನ್ನು ಸೆಳೆದಿದ್ದಾರೆ, ಬಹುಶಃ ಅದು ಪುರಸಭೆಯಾಗಿರಬಹುದು ನಗರ ಸಭೆಯಾಗಿರಬಹುದು ಅಥವಾ ನಗರ ಮಹಾಪಾಲಿಕೆ ಇರಬಹುದು ಈ ನಗರಗಳ ಚೌಕಟ್ಟಿನಲ್ಲಿ ನೈರ್ಮಲ್ಯವನ್ನು ಕಾಪಾಡತಕ್ಕದ್ದು ಅತ್ಯಗತ್ಯ ಎಂಬ ಸುತ್ತೋಲೆಯನ್ನು ಈಗಾಗಲೇ ಎಲ್ಲರಿಗೂ ಕಳುಹಿಸಿಕೊಟ್ಟಿದ್ದೇವೆ ಬಹುಶಃ ಮಾನ್ಯ ಸದಸ್ಯರು ಈಗ ಏನು ಪ್ರಸ್ತಾಪ ಮಾಡಿದ್ದಾರೆ ಅದು ನನಗೆ ತಿಳಿದುಬಂದಿದೆ. ನಾನು ಅಧಿವೇಶನ ಮುಗಿವ ತಕ್ಷಣವೇ ನಾನು ಮಂಗಳೂರು ನಗರಕ್ಕೆ ಭೇಟಿ ಕೊಡಲಿದ್ದೇನೆ ಆ ಸಮಯದಲ್ಲಿ ನಾನು ಅದರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಸ್ಥಳವನ್ನು ಅಜಮಾಯಿಸಿ ನೋಡಿ ಸೂಕ್ತ ಸ್ಥಳದಲ್ಲಿಇಂತಹ ಕಸಕಡ್ಡಿಗಳನ್ನು,ಹಾಕಲಿಕ್ಕೆ ಒಂದು ವ್ಯವಸ್ಥೆ ಮಾಡುತ್ತೇನೆ ಎನ್ನುವ ಕಟ್ಟುನಿಟ್ಟಿನ ಭರವಸೆಯನ್ನು ಕಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇನೆ.

ಕನ್ನಡ ವೃತ್ತಿ ರಂಗ ಭೂಮಿಗೆ ಸಹಾಯ ಧನ

೨೮೪. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಶಿಕ್ಷಣ, ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

೮) ಕರ್ನಾಟಕದಲ್ಲಿ ಅತ್ಯಂತ ವೈಭವವಾಗಿ ಮೆರೆದ ಕನ್ನಡ ವೃತ್ತಿ ರಂಗಭೂಮಿ ಇಂದಿಂ ಅವಸಾನದ ಅಂಚಿನಲ್ಲಿರುವುದು ಸರ್ಕಾರದ ಆಗಮನಕ್ಕೆ ಬಂದಿದೆಯೇ ?